ತ್ವರಿತ ಪರಿಹಾರವಾಗಿ ನಗರದ ಹಳೇ ಬಡಾವಣೆಗಳಲ್ಲಿ 358 ಕೊಳವೆ ಬಾವಿಗಳನ್ನು ಕೊರೆದು ಇವುಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.

ಈ) ಬೆಂಗಳೂರು ನಗರಕ್ಕೆ ಶಾಶ್ವತವಾಗಿ ಕುಡಿಯುವ ನೀರನ್ನು ಒದಗಿಸಲು ಕಾವೇರಿ 4ನೇ ಹಂತ 2ನೇ ಘಟ್ಟ ಕೈಗೆತ್ತಿಕೊಂಡು ಇದರಿಂದ ನಗರಕ್ಕೆ ಹೆಚ್ಚುವರಿಯಾಗಿ ದಿನಂಪ್ರತಿ 500 ದಶ ಲಕ್ಷ ಲೀಟರ್ ನೀರು ಸರಬರಾಜು ಮಾಡಲು ಯೋಜನೆ ರೂಪಿಸಲಾಗಿದೆ.

771 ಶ್ರೀ ಶ್ರೀನಿವಾಸ್ ಎಂ. : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರಕ್ಕೆ ವರ್ತುಲ ರಸ್ತೆ (ರಿಂಗ್‌ರೋಡ್) ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಹಿಂದೆಯೇ ಗುರುತಿಸಿದ್ದ ಸ್ಥಳದಲ್ಲಿಯೇ ವರ್ತುಲ ರಸ್ತೆ (ರಿಂಗ್‌ರೋಡ್) ಮಾಡಲಾಗುವುದೇ ಅಥವಾ ಬೇರೆ ಯಾವುದಾದರೂ ಸ್ಥಳವನ್ನು ಗುರುತಿಸಿದೆಯೇ (ವಿವರಗಳನ್ನು ನೀಡುವುದು);

ಇ) ಮಂಡ್ಯ ನಗರದ ವರ್ತುಲ ರಸ್ತೆ ಕಾಮಗಾರಿಗಾಗಿ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು;

ಇ) ವರ್ತುಲ ರಸ್ತೆಯ ಕಾಮಗಾರಿಯು ಪ್ರಾರಂಭವಾಗಿರುವುದೇ;

ಉ) ಹಾಗಿದ್ದಲ್ಲಿ, ಕಾಮಗಾರಿಯು ಯಾವ ಹಂತದಲ್ಲಿದೆ (ವಿವರಗಳನ್ನು ನೀಡುವುದು)?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ.

ಆ) ಇ) ಈ) ಮತ್ತು ಉ)

ಉದ್ಭವಿಸುವುದಿಲ್ಲ.

1063 ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ (ಕುಷ್ಟಗಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ, ಲಿಂಗಸೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಹಟ್ಟಿ ಚಿನ್ನದ ಗಣಿಯಲ್ಲಿ ತಾತ್ಕಾಲಿಕವಾಗಿ ಯಾವ ಯಾವ ಭಾಗಗಳಲ್ಲಿ ಎಷ್ಟು ಜನರು ಕರ್ತವ್ಯ ನಿರ್ವಹಿಸುತ್ತಿದ್ದಾರೆ;